ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001.**

ಸಂಖ್ಯೆ:ಸಿ7[2]: ಪ್ರಾಶಿಅ.ಹೊ.ಶಾ.ನೋಂ-369/2015-16 **ದಿನಾಂಕ: 09-03-2016**

**ನಮೂನೆ-2**

**ನಿಯಮ 3 ಉಪನಿಯಮ 5(ಬಿ)**

**ಪ್ರಮಾಣ ಪತ್ರ ಸಂಖ್ಯೆ : 144/2015-16**

**ಎಸ್.ಎಲ್.ಎನ್. ಎಜುಕೇಷನ್ ಅಂಡ್ ಸೋಷಿಯಲ್ ಟ್ರಸ್ಟ್ (ರಿ), ನಂ.7, ಸುಭಾಷ್ ನಗರ, ನೆಲಮಂಗಲ, ಬೆಂಗಳೂರು.** ಇವರಿಗೆ ಕರ್ನಾಟಕ ಶಿಕ್ಷಣ ಕಾಯ್ದೆ 1983 (ಕರ್ನಾಟಕ ಆಕ್ಟ್ 1995) ಸೆಕ್ಷನ್ 31 ರಂತೆ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಇಡಿ 44 ಪಿ ಜಿ ಸಿ 2002, ದಿನಾಂಕ : 11.06.2002ರ ಪ್ರಕಾರ ಈ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು ಕ್ರಮ ಸಂಖ್ಯೆ **144** ಪುಟ ಸಂಖ್ಯೆ: **209** ಸಂಪುಟ ಸಂಖ್ಯೆ: **18** ರಲ್ಲಿ ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೋಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

| | | |
|---|---|---|
| 1 | ಕ್ರಮ ಸಂಖ್ಯೆ | **144/2015-16** |
| 2 | ಶಾಲೆಯ ಹೆಸರು ಮತ್ತು ವಿಳಾಸ | **ವಿಶಾಲ್ ಪಬ್ಲಿಕ್ ಸ್ಕೂಲ್, ಪೈಪ್ ಲೈನ್ ರಸ್ತೆ, ಟಿ.ದಾಸರಹಳ್ಳಿ, ಬೆಂಗಳೂರು-560057.** |
| 3 | ಅನುಮತಿ ನೀಡಿದ ತರಗತಿ | **6 ನೇ ತರಗತಿ, 7 ನೇ ತರಗತಿ ಮತ್ತು 8ನೇ ತರಗತಿ [ಶಾಶ್ವತ ಅನುದಾನ ರಹಿತವಾಗಿ]** |
| 4 | ಪ್ರಾರಂಭಿಸಬೇಕಾದ ಶೈಕ್ಷಣಿಕ ವರ್ಷ | **6ನೇ ತರಗತಿ- 2015-16 – 1 ವಿಭಾಗ<br>7ನೇ ತರಗತಿ- 2016-17 – 1 ವಿಭಾಗ<br>8ನೇ ತರಗತಿ- 2017-18 – 1 ವಿಭಾಗ<br>ಒಟ್ಟು – 3 ವಿಭಾಗಗಳು** |
| 5 | ಅನುಮತಿ ನೀಡಿದ ಮಾಧ್ಯಮ | **ಆಂಗ್ಲ ಮಾಧ್ಯಮ** |
| 6 | ಶುಲ್ಕ ಪಾವತಿ ಮಾಡಿರುವುದು | **ನೋಂದಣಿ ಶುಲ್ಕ ರೂ 10,000-00** |

ಈ ನೋಂದಣಿ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ನೀಡಲಾಗಿದೆ. ಇದರಲ್ಲಿ ಯಾವುದೇ ಷರತ್ತನ್ನು ಉಲ್ಲಂಘಿಸಿದಲ್ಲಿ ಮೇಲ್ಕಂಡ [ನೋಂದಣಿ] ಅನುಮತಿಯನ್ನು ರದ್ದುಪಡಿಸುವ ಅಧಿಕಾರವನ್ನು ಇಲಾಖೆಯು ಕಾಯ್ದಿರಿಸಿಕೊಂಡಿದೆ.

1. ಈ ನೋಂದಾವಣೆಯು ಕರ್ನಾಟಕ ಶಿಕ್ಷಣ ಸಂಸ್ಥೆಗಳು [ಖಾಸಗಿ ಶಿಕ್ಷಣ ಸಂಸ್ಥೆಗಳ ನಿಯಂತ್ರಣ, ವರ್ಗೀಕರಣ] ನಿಯಮ-1997 ನಿಯಮ-3 [5] [ಡಿ] ನಲ್ಲಿ ಸೂಚಿಸಿರುವ ಅಂಶಗಳಿಗೆ ಒಳಪಟ್ಟಿರುತ್ತದೆ.
2. ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯವಸ್ತು ನಿಗಧೀಕರಣ ಇತ್ಯಾದಿ) ನಿಯಮಾವಳಿಗಳು 1995ರ ನಿಯಮ 4, 5, 6 ಮತ್ತು 8 ರನ್ವಯ ಸುರಕ್ಷತಾ ಕ್ರಮವಾಗಿ, ಶಾಲಾ ಕಟ್ಟಡವು ಕಡ್ಡಾಯವಾಗಿ ಉತ್ತಮ ಗುಣಮಟ್ಟದ ಮೇಲ್ಚಾವಣೆಯನ್ನು ಹೊಂದಿದ್ದು, ಉತ್ತಮ ಗಾಳಿ ಬೆಳಕಿಗೆ ಅವಕಾಶವಿರಬೇಕು. ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯಗಳನ್ನು ಒದಗಿಸಬೇಕು. ಕುಡಿಯುವ ನೀರನ್ನು ಒದಗಿಸಿರಬೇಕು. ಶಾಲಾ ಆವರಣದಲ್ಲಿರುವ ಅಪಾಯಕಾರಿ ಸ್ಥಳಗಳಿಗೆ ಬೇಲಿ ಹಾಕಿ, ಶಾಲಾ ಆವರಣಕ್ಕೆ ಮಕ್ಕಳ ಸುರಕ್ಷತೆಗಾಗಿ ಕಾಂಪೌಂಡ್‌ನ್ನು ಕಡ್ಡಾಯವಾಗಿ ನಿರ್ಮಿಸತಕ್ಕದ್ದು, ಬೆಂಕಿ ಆಕಸ್ಮಿಕಗಳನ್ನು ತಪ್ಪಿಸಲು ಅಗತ್ಯ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳಬೇಕು.
3. ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.
4. ಕರ್ನಾಟಕ ಶಿಕ್ಷಣ ಕಾಯ್ದೆ ಸೆಕ್ಷನ್-41[5] ರಂತೆ ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.
5. ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿ ನಡೆಸತಕ್ಕದ್ದು ಮತ್ತು ಯಾವುದೇ ಕಾರಣಕ್ಕೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹಸ್ತಾಂತರಿಸತಕ್ಕದ್ದಲ್ಲ.
6. ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಹಾಗೂ ಆಗಿಂದಾಗ್ಗೆ ಹೊರಡಿಸಿದ ಎಲ್ಲಾ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು. ಕರ್ನಾಟಕ ಶಿಕ್ಷಣ ಮಸೂದೆ 1983[ಕರ್ನಾಟಕ ಆಕ್ಟ್ ಸಂಖ್ಯೆ:1:95]ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಮತ್ತು ಅದರಲ್ಲಿ ರಚಿಸಲಾಗಿರುವ ನಿಯಮಗಳನ್ನು ತಪ್ಪದೆ ಪಾಲಿಸತಕ್ಕದ್ದು.
7. ಈ ಪ್ರಾಥಮಿಕ ಶಾಲಾ ನೋಂದಾವಣೆಯು ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ 175 ಪಿ.ಎಂ.ಸಿ 95, ದಿನಾಂಕ :07-09-98ಮತ್ತು ದಿನಾಂಕ : 29-12-98 ರ ಪ್ರಕಾರ ಶಾಶ್ವತ ಅನುದಾನರಹಿತವಾಗಿರುತ್ತದೆ. [Permanently without-aid]
8. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ [ಶಿಸ್ತು ಮತ್ತು ನಿಯಂತ್ರಣ] ನಿಯಮ 1999ರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು/ ಅವುಗಳಿಗೆ ಬದ್ಧವಾಗಿರತಕ್ಕದ್ದು.
9. ಕರ್ನಾಟಕ ಶಿಕ್ಷಣ ಸಂಸ್ಥೆಗಳ(ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯ ವಸ್ತುನಿಗಧೀಕರಣ ಇತ್ಯಾದಿ) ನಿಯಮಾವಳಿ 1995ರನ್ವಯ ಇಲಾಖೆ ಮತ್ತು ಸರ್ಕಾರ ನಿಗಧಿಪಡಿಸಿದ ಪಠ್ಯಪುಸ್ತಕಗಳನ್ನು ಮಾತ್ರ ಬೋಧಿಸತಕ್ಕದ್ದು ಹಾಗೂ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಹೊರೆಯಾಗದಂತೆ ಕ್ರಮವಹಿಸುವುದು.
10. ಕರ್ನಾಟಕ ಶಿಕ್ಷಣ ಸಂಸ್ಥೆಗಳ(ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯ ವಸ್ತುನಿಗಧೀಕರಣ ಇತ್ಯಾದಿ) ನಿಯಮಾವಳಿ 1995. ದಿನಾಂಕ:04-10-96ರ ನಿಯಮ-10ರಂತೆ ಟರ್ಮ್ ಶುಲ್ಕ, ಬೋಧನಾ ಶುಲ್ಕ, ವಿಶೇಷ ಅಭಿವೃದ್ಧಿ ಶುಲ್ಕಗಳನ್ನು ಮಾತ್ರ ವಸೂಲಿ ಮಾಡತಕ್ಕದ್ದು ಹಾಗೂ ನಿಯಮ 10(04)ರಂತೆ ಶಾಲೆಯಲ್ಲಿ ವಿದ್ಯಾರ್ಥಿ/ಪೋಷಕರಿಂದ ವಸೂಲಿ ಮಾಡುವ ಶುಲ್ಕಗಳ ವಿವರಗಳ ಒಂದು ಬ್ರೋಚರ್ ಅನ್ನು ಶಾಲೆಯ ಸೂಚನಾಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸಿ, ಅದರ ಒಂದು ಪ್ರತಿಯನ್ನು ಕ್ಷೇತ್ರ